ಹಾಕಿ ಬೆಳೆಸುತ್ತಿದ್ದಾರೆ. ಬೇರೆ ಜಿಲ್ಲೆಗಳಲ್ಲೂ ಎಷ್ಟು ಬೆಳೆಸುತ್ತಿದ್ದೀರಿ ಎಂದು ನಾನು ಪ್ರಶ್ನೆ ಕೇಳಿದ್ದೇನೆ ಅಷ್ಟೆ.

ಅಧ್ಯಕ್ಷರು:– ತಮ್ಮ ಪ್ರಶ್ನೆಯನ್ನು ನಾನು ತಡೆಹಿಡಿಯುತ್ತೇನೆ. ಏಕೆಂದರೆ ಅದನ್ನು ಬೇರೆ ಇಲಾಖೆಗೆ ವರ್ಗಾಯಿಸಿದ್ದಾರೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾವು ಬೃಂದಾವನ ಎಂದರೆ ಮಾನ್ಯ ಕೃಷ್ಣಾರವರಿಗೆ ಅರ್ಥವಾಗುತ್ತದೆ. ಮಧುವನ ಎಂದರೆ ಅರ್ಥವಾಗುತ್ತದೆ. ಆದರೆ ಈಚಲುವನ ಎಂದರೆ ಏನು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಈ ಈಚಲುವನ ಯಾವಾಗ, ಯಾರ ಕಾಲದಲ್ಲಿ ಪ್ರಾರಂಭವಾಯಿತೆಂಬುದು ನನಗೆ ಗೊತ್ತಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಈಚಲುವನ ಪ್ರಾರಂಭವಾಯಿತು. ಈಗ ನಾವು ಅರ್ಧ ಕಿತ್ತುಹಾಕಿದ್ದೇವೆ. ಇನ್ನು ಅರ್ಧ ಕಿತ್ತು ಹಾಕೋಣವೇ ? ಮಾನ್ಯ ಮುಖ್ಯ ಮಂತ್ರಿಗಳು ನಮಗೆ ಪರವಾನಗಿಯನ್ನು ಕೊಟ್ಟರೆ ನಾವು ಆ ಕೆಲಸವನ್ನು ಮಾಡುತ್ತೇವೆ. ನಾವು ಗಾಂಧೀಜಿಯವರ ಫೋಟೋವನ್ನು ಇಲ್ಲಿ ಹಾಕಿಕೊಂಡಿದ್ದೇವೆ. ನನ್ನ ಪ್ರಶ್ನೆಗೆ ಉತ್ತರ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಈ ಪ್ರಶ್ನೆಯನ್ನು ಎಕ್ಸೈಸ್ ಇಲಾಖೆಗೆ ಕಳುಹಿಸಿದ್ದೇವೆಂದು ಹೇಳುತ್ತಿದ್ದಾರೆ. ನಾನಾದರೂ ಹೇಳುತ್ತೇನೆ; ಫೋಟೋವನ್ನು ತೆಗೆಯಿರಿ, ಇಲ್ಲದಿದ್ದರೆ ಈಚಲು ಗಿಡವನ್ನಾದರೂ ತೆಗೆಯಿರಿ. ಎರಡರಲ್ಲಿ ಒಂದನ್ನು ತೆಗೆಯಿರಿ.

ಅಧ್ಯಕ್ಷರು:– ಪಟ್ಟಣ ಶೆಟ್ಟಿಯವರೆ, ತಮ್ಮ ಚುಪ್ರ 2099ಕ್ಕೆ ಮಾನ್ಯ ಮಂತ್ರಿಗಳು 7 ದಿವಸ ಕಾಲಾವಕಾಶ ಕೇಳಿದ್ದಾರೆ.

ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯನ್ನು ಆಧುನೀಕರಣಗೊಳಿಸುವ ಬಗ್ಗೆ

1702: ಶ್ರೀ ಯಜಮಾನ್ ಮೋತಿ ವೀರಣ್ಣ (ದಾವಣಗೆರೆ):–

ವೈದ್ಯಕೀಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದ ಚಿಗಟೇರಿ ಜನರಲ್ ಆಸ್ಪತ್ರೆಯ ಆಧುನೀಕರಣಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆಯೇ;

ಆ) ಇದ್ದಲ್ಲಿ, ಆ ಕಾರ್ಯಕ್ರಮಗಳ ವಿವರ ನೀಡುವುದು ?

ಶ್ರೀ ಜಿ. ರಾಮಕೃಷ್ಣ (ವೈದ್ಯಕೀಯ ಶಿಕ್ಷಣ ಸಚಿವರು):–

ಅ) ಹೌದು.

ಆ) 1.ದಾವಣಗೆರೆ ಚಿಗಟೇರಿ ಜನರಲ್ ಆಸ್ಪತ್ರೆಯ ಆಧುನೀಕರಣಕ್ಕೆ ಈ ವರ್ಷದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ.

ಅ. ಶೈತ್ಯೀಕರಣಗೊಳಿಸಿದ ಶವಾಗಾರದ ಉಪಕರಣವನ್ನು ರಿಪೇರಿ ಮಾಡಲು ರೂ. 18,500–00 ಗಳನ್ನು ವೆಚ್ಚ ಮಾಡಲಾಗುತ್ತಿದೆ.

ಆ. ಐ.ವಿ. ದ್ರಾವಣ ತಯಾರಿಕಾ ಘಟಕಕ್ಕೆ ಅಭಿವೃದ್ಧಿಗೋಸ್ಕರ ರೂ. 1,65,000–00 ಗಳನ್ನು ವೆಚ್ಚ ಮಾಡಲಾಗುತ್ತಿದೆ.

ಇ. ಹೆಂಗಸರ ಮತ್ತು ಮಕ್ಕಳ ವಿಭಾಗದ ಅಭಿವೃದ್ಧಿಗೋಸ್ಕರ ರೂ. 1.00 ಲಕ್ಷಗಳನ್ನು ವೆಚ್ಚ ಮಾಡಲಾಗುತ್ತಿದೆ.

ಈ. ಕೆಲವು ವಾರ್ಡ್‌ಗಳಲ್ಲಿ ವಿದ್ಯುತ್ ಉಪಕರಣಗಳನ್ನು ಅಭಿವೃದ್ಧಿಗೊಳಿಸಲು ರೂ. 18,500ಗಳನ್ನು ವೆಚ್ಚ ಮಾಡಲಾಗುತ್ತಿದೆ.

ಉ. ರಕ್ತ ನಿಧಿ ಕಟ್ಟಡದ ಅಭಿವೃದ್ಧಿಗೆ ರೂ. 32,000-00 ಗಳನ್ನು ಖರ್ಚು ಮಾಡಲಾಗುತ್ತಿದೆ.

2. ಮುಂದಿನ ವರ್ಷದಲ್ಲಿ ಕೈಗೊಳ್ಳುವ ಅಭಿವೃದ್ಧಿ ಕಾರ್ಯಗಳು ಈ ಕೆಳಕಂಡಂತಿವೆ:–

ಅ) ಆಸ್ಪತ್ರೆಗೆ ಎರಡು 50 ಕೆ.ವಿ.ಎ. ಸಾಮರ್ಥ್ಯದ ಡೀಸಲ್ ಜನರೇಟರ್‌ಗಳ ಅಳವಡಿಕೆ.

ಆ) ಶುಶ್ರೂಷಕಿಯರ ಹಾಸ್ಟಲ್ ಕಟ್ಟಡಕ್ಕೆ 2 ನೇ ಅಂತಸ್ತಿನ ನಿರ್ಮಾಣ.

ಇ) ಟಿ.ಬಿ. ಆಸ್ಪತ್ರೆಯ ನಿರ್ಮಾಣ.

ಈ) ನೌಕರರ ವಸತಿ ಗೃಹಗಳ ನಿರ್ಮಾಣ.

ಉ) ಮಕ್ಕಳ ಮತ್ತು ಹೆಂಗಸರ ವಿಭಾಗಕ್ಕೆ ಹೊರ ರೋಗಿ ಕಟ್ಟಡದ ನಿರ್ಮಾಣ.

ಶ್ರೀ ಯಜಮಾನ್ ಮೋತಿ ವೀರಣ್ಣ:– ಮಾನ್ಯ ಅಧ್ಯಕ್ಷರೆ, ದಾವಣಗೆರೆಯ ಸರ್ಕಾರೀ ಸಾರ್ವಜನಿಕ ಆಸ್ಪತ್ರೆಯಲ್ಲಿ ಅಭಿವೃದ್ಧಿ ಕೆಲಸ ಅಂದರೆ ಆಧುನೀಕರಣದ ಕೆಲಸವನ್ನು ಕೈಗೊಂಡಿದ್ದೀರಾ ಎಂದು ನಾನು ಕೇಳಿರುವುದಕ್ಕೆ ತಾವು ಕೊಟ್ಟಿರತಕ್ಕ ಉತ್ತರ ಸಮರ್ಪಕವಾಗಿಲ್ಲ. ಎಲ್ಲ ಪ್ರಶ್ನೆಗಳಿಗೂ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ, ಹಾಕಿಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ನನಗೆ ಸಮರ್ಪಕವಾದ ಉತ್ತರವನ್ನು ತಾವು ನೀಡಿಲ್ಲ. ಅಲ್ಲಿ ಸರ್ಕಾರೀ ಹೆರಿಗೆ ಆಸ್ಪತ್ರೆ ಕೂಡ ಇದೆ. ಅಲ್ಲಿ ವಿದ್ಯುಚ್ಛಕ್ತಿ ವಿಫಲವಾದರೆ ತಕ್ಷಣ ಅವಶ್ಯಕವಾಗಿ ಬೇಕಾದ ಒಂದು ಜನರೇಟರ್ ಕೂಡ ಇಲ್ಲ. ಹೆರಿಗೆಗೆ ಬಂದವರು ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಾದ ಸಂದರ್ಭದಲ್ಲಿ ವಿದ್ಯುಚ್ಛಕ್ತಿ ಹೋದರೆ, ಜನರೇಟರ್ ಇಲ್ಲದೇ ಇದ್ದರೆ ರೋಗಿಗಳು ಎಷ್ಟು ತೊಂದರೆಗೆ ಒಳಗಾಗಬೇಕಾಗುತ್ತದೆಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಜನರೇಟರನ್ನು ಮುಂದಿನ ವರ್ಷ ಖರೀದಿಸಿ ವ್ಯವಸ್ಥೆ ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಮುಂದಿನ ವರ್ಷ ಎಂದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ತಕ್ಷಣವೇ ಅಲ್ಲಿಗೆ ಒಂದು ಜನರೇಟರ್ ಮತ್ತು ಒಂದು ಆಂಬುಲೆನ್ಸ್‌ನ್ನು ಕೊಡತಕ್ಕ ವ್ಯವಸ್ಥೆ ಮಾಡಲು ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತಾರೆಯೇ ಎಂಬ ಬಗ್ಗೆ ಸ್ಪಷ್ಟವಾಗಿ ಉತ್ತರವನ್ನು ನಿರೀಕ್ಷಣೆ ಮಾಡುತ್ತಿದ್ದೇನೆ.

ಶ್ರೀ ಜಿ. ರಾಮಕೃಷ್ಣ:– ನಾವು ಈಗಾಗಲೇ ಸಾಕಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಕಟ್ಟಡ ಕಟ್ಟುವ ಸಲುವಾಗಿ 8.5 ಲಕ್ಷ ರೂ. ಫಾರ್ಮಸಿಯನ್ನು ಆಧುನೀಕರಣಗೊಳಿಸಲು 15 ಲಕ್ಷ ರೂ; ಖರ್ಚು ಮಾಡುತ್ತಿದ್ದೇವೆ. ಎಲೆಕ್ಟ್ರಿಕ್ ಲ್ಯಾಂಡ್ರಿಯನ್ನು ಸ್ಥಾಪಿಸಲಾಗಿದೆ. ಬೇರೆ ಬೇರೆ ಉಪಕರಣಗಳನ್ನು ಖರೀದಿ ಮಾಡಲು 18 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ.

ಈ ವರ್ಷದಲ್ಲಿ ಸುಮಾರು 50 ಕೆ.ವಿ. ಸಾಮರ್ಥ್ಯದ ಡೀಸಲ್ ಜನರೇಟರನ್ನು ಅಳವಡಿಸಲಾಗಿದೆ. ಮುಂದಿನ ವರ್ಷಕ್ಕೆ ತಾವು ಹೇಳಿದ ಪ್ರಕಾರ ಜನರೇಟರನ್ನು ಅಳವಡಿಸುತ್ತೇವೆ. ಶಿಶುಶಸ್ತ್ರ ಚಿಕಿತ್ಸೆಯ ಸಲುವಾಗಿ ಎರಡನೇ ಅಂತಸ್ತಿನ ಕಟ್ಟಡ ನಿರ್ಮಾಣವಾಗುತ್ತಿದೆ. ಟಿ.ಬಿ. ಆಸ್ಪತ್ರೆಯ ನಿರ್ಮಾಣ, ನೌಕರರ ವಸತಿ ಗೃಹ ನಿರ್ಮಾಣ, ಮಕ್ಕಳ ಮತ್ತು ಹೆಂಗಸರ ಹೊರ ರೋಗಿಗಳ ಕಟ್ಟಡದ ನಿರ್ಮಾಣ ಹೀಗೆ ಹೊಸ ಹೊಸ ಸ್ಕೀಮ್‌ಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಯಜಮಾನ್ ಮೋತಿ ವೀರಣ್ಣ:– ತಾವು ಪ್ರವಾಸ ಕಾರ್ಯಕ್ರಮದಲ್ಲಿ ಆ ಕಡೆ ಬಂದಾಗ ಸಾರ್ವಜನಿಕ ಆಸ್ಪತ್ರೆಗಳನ್ನು ವೀಕ್ಷಣೆ ಮಾಡಿದ್ದೀರಾ ? ಕೆಲಸ ಯಾವ ಹಂತದಲ್ಲಿ ಆಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತೆ ಜನರೇಟರ್ ವ್ಯವಸ್ಥೆಯನ್ನು ಮಾಡುತ್ತೇವೆಂದು ಹೇಳಿದ್ದೀರಿ ಕಾಲವಿಳಂಬ ಮಾಡಿದರೆ ಹೆರಿಗೆಯಾಗತಕ್ಕಂಥವರಿಗೆ ಆ ಸಂದರ್ಭದಲ್ಲಿ ತೊಂದರೆಯಾದರೆ ಏನು

ಮಾಡುವುದು ? ಅಂಥ ಒಂದು ಅಮಾನವೀಯ ವ್ಯವಸ್ಥೆ ಇರುತ್ತದೆ. ಆ ದೃಷ್ಟಿಯಿಂದ ತಕ್ಷಣವೇ ಜನರೇಟರನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಅಂಬ್ಯುಲೆನ್ಸ್ ಕೂಡ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಕಾಲರ ಅಲ್ಲಿ ಹರಡುತ್ತಾ ಇದೆ. ಬೇರೆ ಕಡೆ ಹರಡುತ್ತಿರುವಂತೆ ನಮ್ಮ ಊರಿನಲ್ಲಿಯೂ ಕೂಡ ಕಾಲರಾ ಹರಡುತ್ತಿದೆ, ಒಂದು ಅಂಬುಲೆನ್ಸ್ ಕೂಡ ಇಲ್ಲ; ಇಂಥ ಪರಿಸ್ಥಿತಿ ಅಲ್ಲಿದೆ. ಆಂಬುಲೆನ್ಸ್ ರಿಪೇರಿಗೆ ಹೋಗಿದೆ ಎಂದು ಹೇಳುತ್ತಿರುತ್ತಾರೆ. ಯಾರನ್ನಾದರೂ ತುರ್ತು ಚಿಕಿತ್ಸೆಗೆ ಕಳುಹಿಸಬೇಕಾದರೆ ಏನು ಮಾಡಬೇಕು ? ಇಂಥ ಅವ್ಯವಸ್ಥೆಯನ್ನು ನಾವು ಅನುಭವಿಸುತ್ತಿದ್ದೇವೆ. ಆದ್ದರಿಂದ ತಾತ್ಕಾಲಿಕವಾಗಿ ಆ ಜನರೇಟರನ್ನು ಮತ್ತು ಅಂಬುಲೆನ್ಸ್‌ನ್ನು ತಕ್ಷಣ ಕೊಡಿಸುವಂಥ ವ್ಯವಸ್ಥೆಯನ್ನು ತಾವು ಕೈಗೊಳ್ಳುತ್ತೀರಾ ಎನ್ನುವುದಕ್ಕೆ ಸದನದ ಮೂಲಕ ನನಗೆ ಭರವಸೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ರಾಮಕೃಷ್ಣ:– ಮಾನ್ಯ ಸಭಾಪತಿಯವರೇ, ಅವರು ಕೇಳತಕ್ಕಂಥ ಪ್ರಶ್ನೆ ಬಹಳಷ್ಟು ಮಹತ್ವದ್ದು ಇದೆ. ಅದಕ್ಕಾಗಿ ಜನರೇಟರನ್ನು ತಕ್ಷಣವೇ ನಾವು ತರಿಸಲು ವ್ಯವಸ್ಥೆಯನ್ನು ಮಾಡುತ್ತೇವೆ ಮತ್ತು ಕಟ್ಟಡದ ಬದಲು ಈಗಾಗಲೇ ಬೇಕಾದಷ್ಟು ಖರ್ಚಾಗಿದೆ. ಈ ವರ್ಷವೂ ಅದಕ್ಕೆ ಬೇಕಾದಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ. ಈಗ ಕೈಗೆ ಎಷ್ಟು ಕೆಲಸವನ್ನು ತೆಗೆದುಕೊಂಡಿದ್ದೇವೆ, ಅಷ್ಟನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಲು ನಾವು ಆದೇಶವನ್ನು ಕೊಡುತ್ತೇವೆ.

ಅಧ್ಯಕ್ಷರು:– ಈಗ ಸಿ.ಎಂ. ಲಿಂಗಪ್ಪನವರ ಪ್ರಶ್ನೆಯನ್ನು ಅವರ ಪರವಾಗಿ ಡಾ।। ನಂಜಪ್ಪನವರು ಕೇಳಬಹುದು.

ಸಹಾಯಕ ಶಿಕ್ಷಣಾಧಿಕಾರಿಗಳಿಗೆ ವಾಹನ

2050: ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ):–

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕಿಗೊಬ್ಬರಂತೆ ಇರುವ ಸಹಾಯಕ ಶಿಕ್ಷಣಾಧಿಕಾರಿಗಳ ವ್ಯಾಪ್ತಿಗೆ ಸುಮಾರು ಎಷ್ಟು ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಬೋಧಕ ಮತ್ತು ಬೋಧಕೇತರ ವರ್ಗದವರು ಒಳಪಡುತ್ತಾರೆ;

ಆ) ಇಷ್ಟು ಸಂಖ್ಯೆ ಶಾಲೆಗಳನ್ನು ಮತ್ತು ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯನ್ನು ಉಸ್ತುವಾರಿ ಮಾಡಲು ಈ ಅಧಿಕಾರಿಗೆ ವಾಹನ ಸೌಕರ್ಯವನ್ನು ಕಲ್ಪಿಸಿಕೊಡಲಾಗಿದೆಯೇ;

ಇ) ಕೆಲಸವೇ ಇಲ್ಲದ ಕೆಲವು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಜೀಪುಗಳನ್ನು ಕೊಟ್ಟಿರುವಾಗ ಇಷ್ಟೊಂದು ಹೆಚ್ಚಿನ ಸಂಖ್ಯೆಯ ಶಾಲೆಗಳನ್ನು ಮತ್ತು ಸಿಬ್ಬಂದಿಯನ್ನು ಉಸ್ತುವಾರಿ ನೋಡಿಕೊಳ್ಳಬೇಕಾಗಿರುವ ಸಹಾಯಕ ಶಿಕ್ಷಣಾಧಿಕಾರಿಗಳಿಗೆ ಒಂದು ಜೀಪು ಕೊಡುವುದು ಉಚಿತವಲ್ಲವೆ ?

ಡಾ।। ಹೆಚ್.ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–

ಅ) ಸುಮಾರು 125 ಕಿರಿಯ ಪ್ರಾಥಮಿಕ ಶಾಲೆಗಳು ಮತ್ತು 90 ಹಿರಿಯ ಪ್ರಾಥಮಿಕ ಶಾಲೆಗಳು ಹಾಗೂ 750 ಶಿಕ್ಷಕ ಸಿಬ್ಬಂದಿ ವರ್ಗವೂ ಪ್ರತಿ ಸಹಾಯಕ ಶಿಕ್ಷಣಾಧಿಕಾರಿಯ ವ್ಯಾಪ್ತಿಗೆ ಒಳಪಡುತ್ತದೆ.

ಆ) ಇಲ್ಲ.